# ಆಯೇಷಾಗೆ ಪೊಲೀಸ್ ಸಮವಸ್ತ್ರ



ಸಾಹಸಪ್ರಧಾನ ಚಿತ್ರಗಳಲ್ಲಿ ನಟಿಸುವ ಮೂಲಕ ಜನಪ್ರಿಯತೆ ಪಡೆದಿರುವ ಬೆರಳೆಣಿಕ ನಾಯಕಿಯರಲ್ಲಿ ಆಯೇಷಾ ಒಬ್ಬರು. ಕರಾಟೆಯಲ್ಲಿ ಬ್ಲ್ಯಾಕ್‌ಬೆಲ್ಟ್ ಪಡೆದಿರುವ ಈ ಹುಡುಗಿ, ಯಾವುದೇ ನಾಯಕನಿಗೆ ಕಡಿಮೆಯಿಲ್ಲದಂತೆ ಸಾಹಸದೃಶ್ಯಗಳಲ್ಲಿ ಕಾಣಿಸಿಕೊಳ್ಳಬಲ್ಲಳು. 'ಬೇಟೆ', 'ಚೆನ್ನಮ್ಮ ಐಪಿಎಸ್', 'ಜಯಹೇ'– ಹೀಗೆ ಆಯೇಷಾ ನಟನೆಯ ಚಿತ್ರಗಳೆಲ್ಲ ನಾಯಕಿಪ್ರಧಾನ ಹಾಗೂ ಸಾಹಸಪ್ರಧಾನ. ಈ ಸಾಲಿಗೆ ಸೇರುತ್ತಿರುವ ಹೊಸ ಸಿನಿಮಾ 'ಜನ ಗಣ ಮನ'.

ಇತ್ತೀಚೆಗೆ ಕನ್ನಡ ಚಿತ್ರರಂಗದಿಂದ ಹೆಚ್ಚೂ ಕಡಿಮೆ ನಿರ್ಗಮಿಸಿದ್ದ ಆಯೇಷಾ 'ಜನ ಗಣ ಮನ' ಮೂಲಕ ಹೊಸ ಇನಿಂಗ್ಸ್ ಪ್ರಾರಂಭಿಸಿದ್ದಾರೆ. ಶಶಿಕಾಂತ್ ಆನೇಕಲ್ ನಿರ್ದೇಶನದ ಈ ಸಿನಿಮಾ ಶೀರ್ಷಿಕೆಯೇ ಹೇಳುವಂತೆ ದೇಶಪ್ರೇಮವನ್ನು ಸಾರುವ ಸಿನಿಮಾ. ದೇಶಪ್ರೇಮಿ ಎಂದಮೇಲೆ ವಿರೋಧಿಯೂ ಇರಬೇಕಲ್ಲ! ಅಂಥ ವಿರೋಧಿಗಳನ್ನು ನಾಯಕಿ ಮಟ್ಟಹಾಕುವ ಕಥೆ 'ಜನ ಗಣ ಮನ'. ಆಯೇಷಾ ಅವರ ಪ್ರತಿಭೆ ಪರಿಣಾಮಕಾರಿಯಾಗಿ ಅನಾವರಣಗೊಳ್ಳುವಂತೆ ಶಶಿಕಾಂತ್ ಚಿತ್ರಕಥೆ ಹೆಣೆದಿದ್ದಾರಂತೆ.

ಡ್ಯಾನಿ ಹಾಗೂ ಚಂದ್ರು ಚಿತ್ರದ ಸಾಹಸ ಸಂಯೋಜಕರು. ಇತ್ತೀಚೆಗಷ್ಟೇ ಚಿತ್ರದ ಸಾಹಸ ದೃಶ್ಯವೊಂದನ್ನು ಚಂದ್ರು ಅವರ ಸಾಹಸ ಸಂಯೋಜನೆಯಲ್ಲಿ ಚಿತ್ರತಂಡ ಚಿತ್ರೀಕರಿಸಿಕೊಂಡಿದೆ. ರವಿಕಾಳೆ, ರಾಮಕೃಷ್ಣ, ಕಾವೇರಪ್ಪ, ಎ.ಕೆ.ರಾಮು, ಸೌಂದರ್ಯ ಹಾಗೂ ಸೌಮ್ಯ ತಾರಾಗಣದಲ್ಲಿರುವ ಪ್ರಮುಖರು.



# ರೈತಪರ 'ಬಂಗಾರ'

ಶಿವರಾಜ್‌ಕುಮಾರ್ ನಟನೆಯ 'ಬಂಗಾರ – ಸನ್ ಆಫ್ ಬಂಗಾರದ ಮನುಷ್ಯ' ಸಿನಿಮಾ ತೆರೆ ಕಾಣಲು ಸಿದ್ಧವಾಗಿದೆ. ಇದಕ್ಕೆ ಪೂರ್ವಭಾವಿ ಯಾಗಿ ಚಿತ್ರದ ಟ್ರೈಲರ್ ಕಳೆದ ವಾರ ಬಿಡುಗಡೆಯಾಗಿದೆ. ಚಿತ್ರದಲ್ಲಿ ಶಿವಣ್ಣ ಉದಾತ್ತ ವ್ಯಕ್ತಿತ್ವದ ನಾಯಕನ ಪಾತ್ರದಲ್ಲಿ ಕಾಣಿಸಿಕೊಂಡಿದ್ದು, ಇದು ಕೌಟುಂಬಿಕ ಮನರಂಜನೆಯ ರೂಪದಲ್ಲಿ ಚಿತ್ರರಸಿಕರ ಗಮನಸೆಳೆಯಲಿದೆ ಎಂದು ಚಿತ್ರತಂಡ ಹೇಳುತ್ತಿದೆ. 'ಬಾರ್ನ್ ಫಾರ್ ದಿ ಪೀಪಲ್' ಎನ್ನುವ ಚಿತ್ರಶೀರ್ಷಿಕೆಯ ಅಡಿಬರಹ ಕೂಡ ನಾಯಕನ ಜನಪರ ವ್ಯಕ್ತಿತ್ವವನ್ನು ಸೂಚಿಸುವಂತಿದೆ.

ರಾಜಕುಮಾರ್ ಅಭಿನಯದ 'ಬಂಗಾರದ ಮನುಷ್ಯ' ಕನ್ನಡದ ಅತ್ಯುತ್ತಮ ಚಿತ್ರಗಳಲ್ಲೊಂದು. ರೈತರ ಬದುಕಿನ ನೋವು ನಲಿವುಗಳ ಜೊತೆಗೆ ಗ್ರಾಮೀಣರ ಘನತೆಯ ಬದುಕನ್ನು ಸಿದ್ದಲಿಂಗಯ್ಯನವರ 'ಬಂಗಾರದ ಮನುಷ್ಯ' ಚಿತ್ರಿಸಿತ್ತು. ಯೋಗಿ ನಿರ್ದೇಶನದ ಈ ಹೊತ್ತಿನ 'ಬಂಗಾರ...' ಕೂಡ ರೈತರ ತವಕ–ತಲ್ಲಣಗಳನ್ನು ಚಿತ್ರಿಸಲಿದೆಯಂತೆ. ಇದರ ಜೊತೆಗೆ ಕೌಟುಂಬಿಕ ಕಥನವನ್ನೂ ಯೋಗಿ ತಳಕು ಹಾಕಿದ್ದಾರಂತೆ.

ಯೋಗಿ ಅವರ ಪಾಲಿಗಿದು ನಿರ್ದೇಶನದ ಎರಡನೇ ಸಿನಿಮಾ. ಇದಕ್ಕೆ ಮುನ್ನ 'ಖುಷಿ ಖುಷಿಯಾಗಿ' ಎನ್ನುವ ಚಿತ್ರ ನಿರ್ದೇಶಿಸಿದ್ದ ಅವರು, 'ಬಂಗಾರ..' ಮೂಲಕ ವೃತ್ತಿಜೀವನದ ಹೊಸ ಮಜಲು ತಲುಪುವ ನಿರೀಕ್ಷೆಯಲ್ಲಿದ್ದಾರೆ.

ಜಯಣ್ಣ–ಭೋಗೇಂದ್ರ ನಿರ್ಮಾಣದ ಈ ಚಿತ್ರದ ತಾರಾಗಣದ ಮುಂಚೂಣಿಯಲ್ಲಿ ಚಿಕ್ಕಣ್ಣ, ಸಾಧು ಕೋಕಿಲ, ಶ್ರೀನಿವಾಸಮೂರ್ತಿ, ಶಿವರಾಮಣ್ಣ, ಶ್ರೀನಾಥ್, ಸದಾಶಿವ ಬ್ರಹ್ಮಾವರ್, ಶರತ್ ಲೋಹಿತಾಶ್ವ ಹಾಗೂ ಮೈಕೋ ನಾಗರಾಜ್ ಇದ್ದಾರೆ. ವಿದ್ಯಾ ಪ್ರದೀಪ್ ಚಿತ್ರದ ನಾಯಕಿ. ಹರಿಕೃಷ್ಣರ ಸಂಗೀತ ಹಾಗೂ ಜೈಆನಂದ್ ಛಾಯಾಗ್ರಹಣ ಚಿತ್ರಕ್ಕಿದೆ.